ಓ ಎಸ್ ನಂ. 94/2021

ಪಿ ಡಬ್ಲ್ಯು 3

ದಿನಾಂಕ 09/03/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀಮತಿ ಬಿ ಆರ್ ಆರ್ ವಕೀಲರಿಂದಃ

ನಾನು ಕಡೂರು ತಾಲ್ಲೂಕು ಪಂಚನಹಳ್ಳಿ ಹೋಬಳಿ ಗಂಗನಹಳ್ಳಿ ಗ್ರಾಮದಲ್ಲಿ ವಾಸ ಇದ್ದೇನೆ. ಈ ದಾವೆ ಹೂಡಿದ ವಾದಿ ಕಡೂರು ತಾಲ್ಲೂಕು ಅಣ್ಣೇಗೆರೆ ಗ್ರಾಮದಲಕ್ಲಿ ವಾಸ ಇದ್ದಾರೆ. ನನ್ನ ಗ್ರಾಮವಾದ ಗಂಗನಹಳ್ಳಿಯಿಂದ ಅಣ್ಣೇಗೆರೆ ಗ್ರಾಮಕ್ಕೆ ಸುಮಾರು 20 ಕಿ ಮೀ ಅಂತರ ಇದೆ. ಅಣ್ಣೇಗೆರೆಯಲ್ಲಿ ಸುಮಾರು 150 ಮನೆಗಳು ಇರಬಹುದು. ವಾದಿಯ ತಂದೆ ಕಲ್ಲೇಶಪ್ಪರವರ ಪರಿಚಯ ಇದೆಯಾ ಎಂದರೆ ಸಾಕ್ಷಿ ಸದರಿ ಕಲ್ಲೇಶಪ್ಪರವರ ಮಗನಾದ ವಾದಿ ಪ್ರಕಾಶ್ ರವರಿಗೆ ನನ್ನ ಮಗಳನ್ನು ಕೊಟ್ಟು ಮದುವೆ ಮಾಡಲಾಗಿದೆ ಎಂದು ನುಡಿಯುತ್ತಾರೆ. ನನ್ನ ಮಗಳ ವಿವಾಹವನ್ನು 1970-71 ನೇ ಸಾಲಿನಲ್ಲಿ ನೆರವೇರಿಸಲಾಗಿದೆ.ನನ್ನ ಮಗಳ ಮದುವೆಯಾದ ನಂತರ ನಾನು ಕಲ್ಲೇಶಪ್ಪರವರ ಮನೆಗೆ ಹೋಗುತ್ತಿರಲಿಲ್ಲ ಎಂದರೆ ಸಾಕ್ಷಿ ಕಷ್ಟ ಸುಖಗಳಿಗೆ ಹೋಗಬೇಕಾಗುತ್ತದೆ ಎಂದು ನುಡಿಯುತ್ತಾರೆ. ಕಲ್ಲೇಶಪ್ಪರವರಿಗೆ ಒಟ್ಟು 4 ಜನ ಮಕ್ಕಳು. ಅವರೆಂದರೆ ನಿಂಗಪ್ಪ ಜಯಣ್ಣ ಸೋಮಶೇಖರಪ್ಪ ಮತ್ತು ವಾದಿ ಕೆ ಪ್ರಕಾಶ್. ನನ್ನ ಮಗಳ ಮದುವೆ

ಮಾಡುವ ಸಮಯದಲ್ಲಿ ಕಲ್ಲೇಶಪ್ಪರವರ ಮಗ ನಿಂಗಪ್ಪರವರು ಒಟ್ಟಿಗೆ ಇದ್ದರಾ ಎಂದರೆ ಸಾಕ್ಷಿ ಇಲ್ಲ ಪ್ರತ್ಯೇಕವಾಗಿದ್ದರು ಎಂದು ನುಡಿಯುತ್ತಾರೆ. ಸದರಿ ನಿಂಗಪ್ಪರವರು ಆಸ್ತಿಗಳನ್ನು ಪಡೆದುಕೊಂಡು ವಿಭಾಗ ಆಗಿ ಹೋಗಿದ್ದರಾ ಎಂದರೆ ಸಾಕ್ಷಿ ಕಲ್ಲೇಶಪ್ಪರವರು ನಿಂಗಪ್ಪರವರಿಗೆ ಏನು ಕೊಟ್ಟಿರುತ್ತಾರೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕಲ್ಲೇಶಪ್ಪರವರಿಗೆ ಎಷ್ಟು ಆಸ್ತಿಗಳು ಇದ್ದವು ಎಂದು ನಾನು ತಿಳಿದುಕೊಂಡಿದ್ದೇನಾ ಎಂದರೆ ಸಾಕ್ಷಿ ಸರ್ವೆ ನಂ.156 ರ 13 ಗುಂಟೆ ಸ್ವತ್ತಿನ ಬಗ್ಗೆ ಮಾತ್ರ ನನಗೆ ಗೊತ್ತು ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಕಲ್ಲೇಶಪ್ಪರವರ ಮೂರು ಜನ ಮಕ್ಕಳಾದ ಚಂದ್ರಶೇಖರಪ್ಪ, ಜಯಣ್ಣ ಮತ್ತು ಪ್ರಕಾಶ್ ರವರು ವಿಭಾಗ ಮಾಡಿಕೊಂಡಿರುತ್ತಾರೆ ಎಂದು ತಿಳಿಸಿದ್ದು ಯಾವ ಯಾವ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಭಾಗವಾದ ಬಗ್ಗೆ ಬರವಣಿಗಿಯಾಗಿದೆ ಎಂದು ತಿಳಿಸಿದ್ದು, ಆ ಬರವಣಿಗೆಯನ್ನು ನಾನು ನೋಡಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಮೂರು ಜನರಿಗೂ ಸಹ ಹಿಸ್ಸೆ ನೀಡಿರುತ್ತಾರೆ, ಆದರೆ ನನಗೆ ಸರ್ವೆ ನಂಬರು ನೆನಪಿಲ್ಲ ಎಂದು ನುಡಿಯುತ್ತಾರೆ. ನನ್ನ ಅಳಿಯ ಪ್ರಕಾಶ್ ರವರ ಹೆಸರಿಗೆ ಪಾಲುಪಾರಿಕತ್ತಿನಲ್ಲಿ ಯಾವ ಯಾವ ಆಸ್ತಿಗಳನ್ನು ಕೊಟ್ಟಿರುತ್ತಾರೆಂದು ತಿಳಿದುಕೊಂಡಿರುತ್ತೇನಾ ಎಂದರೆ ಸಾಕ್ಷಿ

ಇಲ್ಲವೆಂದು ನುಡಿಯುತ್ತಾರೆ. ಪಾಲುಪಾರಿಕತ್ತು ಆದ ನಂತರ ಮೇಲೆ ಹೇಳಿದ ಚಂದ್ರಶೇಖರಪ್ಪ, ಜಯಣ್ಣ ಮತ್ತು ಪ್ರಕಾಶ್ ರವರು ಖಾತೆ ಮಾಡಿಸಿಕೊಂಡಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಜಮೀನುಗಳು ಒಟ್ಟಿಗೆ ಇರುತ್ತವೆ ಎಂದು ನುಡಿಯುತ್ತಾರೆ. ಜಮೀನಿನ ಖಾತೆಗಳು ಯಾರ ಹೆಸರಿನಲ್ಲಿದೆ ಎಂದು ತಿಳಿದುಕೊಂಡಿರುತ್ತೇನಾ ಎಂದರೆ ಸಾಕ್ಷಿ ನನಗೆ ಖುದ್ದಾಗಿ ಮಾಹಿತಿ ಇಲ್ಲ, ಆದರೆ ನನ್ನ ಅಳಿಯ ಪ್ರಕಾಶ್ ರವರು ಹೇಳಿದ ಪ್ರಕಾರ ಅವರಲ್ಲಿ ಹಿರಿಯರಾದ ಚಂದ್ರಶೇಖರಪ್ಪರವರ ಹೆಸರಿನಲ್ಲಿ ಖಾತೆ ಇದೆ ಎಂದು ನುಡಿಯುತ್ತಾರೆ.

ದಾವೆಯನ್ನು ಯಾವ ಸರ್ವೆ ನಂಬರಿಗೆ ಹೂಡಲಾಗಿದೆ ಎಂದು ಗೊತ್ತಾ ಎಂದರೆ ಸಾಕ್ಷಿ ಸರ್ವೆ ನಂ.156 ಎಂದು ನುಡಿಯುತ್ತಾರೆ. ಸರ್ವೆ ನಂ.156 ರಲ್ಲಿ ಕಲ್ಲೇಶಪ್ಪರವರಿಗೆ ಒಟ್ಟು ಕುಟುಂಬದಲ್ಲಿ ಎಷ್ಟು ಆಸ್ತಿಗಳು ಇವೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು 13 ಗುಂಟೆ ಜಮೀನು ಪ್ರಕಾಶ್ ರವರ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ಸರ್ವೆನಂ.156 ರ ಪೈಕಿ 156/5 ರ 14 ಗುಂಟೆ ಜಮೀನು ಪ್ರಕಾಶ್ ರವರ ಅಣ್ಣ ಜಯಪ್ಪರವರ ಹೆಸರಿನಲ್ಲಿ ಖಾತೆ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇರೀತಿ ಸರ್ವೆ ನಂ.156 ರ ಪೈಕಿ 156/6 ರ 13 ಗುಂಟೆ ಜಮೀನು ನನ್ನ ಅಳಿಯ ಪ್ರಕಾಶ್ ರವರ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.156/8 ರ 13 ಗುಂಟೆ ಜಮೀನು

ಚಂದ್ರಶೇಖರಪ್ಪರವರ ಹೆಸರಿಗೆ ಖಾತೆ ಇದೆ ಎಂದರೆ ಸಾಕ್ಷಿ ಅದೇನೋ ನನಗೆ ಗೊತ್ತಿಲ್ಲ ಕಾನೂನಿನ ಪ್ರಕಾರ ಏನು ಆಗಬೇಕೋ ಆಗಲಿ ಎಂದು ನುಡಿಯುತ್ತಾರೆ. ಸರ್ವೆ ನಂ.156 ರಲ್ಲಿ ಈಗಾಗಲೇ ಆಸ್ತಿಗಳು ವಿಭಾಗ ಆಗಿದ್ದರೂ ಸಹ ನನ್ನ ಅಳಿಯ ಪ್ರಕಾಶ್ ರವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ನನ್ನ ಅಳಿಯ ಎಷ್ಟು ಮುಖ್ಯನೋ ಚಂದ್ರಶೇಖರಪ್ಪರವರು ಅಷ್ಟೇ ಮುಖ್ಯ ಎಂದು ನುಡಿಯುತ್ತಾರೆ. ಸರ್ವೆ ನಂ.156/8 ರ 13 ಗುಂಟೆ ಜಮೀನಿನಲ್ಲಿ 1 ನೇ ಪ್ರತಿವಾದಿ ಚಂದ್ರಶೇಖರಪ್ಪರವರೇ ಸ್ವಾದೀನದಲ್ಲಿರುತ್ತಾರೆ ನನ್ನ ಅಳಿಯ ಅಲ್ಲ ಎಂದರೆ ಸಾಕ್ಷಿ 1971 ರಿಂದಲೂ ಸಹ ಸದರಿ ಸ್ವತ್ತಿನಲ್ಲಿ ನನ್ನ ಅಳಿಯ ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1991 ರಲ್ಲಿ ಆಗಿದೆ ಎಂದು ಹೇಳಲಾದ ಪಾಲುಪರಿಕತ್ತನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.